## ನಿಮ್ಮೊಡನೆ

# ಜಾಲತಾಣಗಳ ಸೆನ್ಸಾರ್?

ಅಂತರ್ಜಾಲ ಎಂಬುದು ಅತ್ಯಂತ ಪ್ರಜಾಸತ್ತಾತ್ಮಕ ವೇದಿಕೆ ಅಥವಾ ಸಾಧನ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆನ್‌ಲೈನ್‌ನ ವಿಶಿಷ್ಟ ಸ್ವರೂಪಗಳನ್ನು ಗೌರವಿಸುವುದೂ ಅಗತ್ಯ. ಆದರೆ 'ದ್ವೇಷ ಬಿತ್ತುವ ವಿಚಾರ'ಗಳ ನಿಯಂತ್ರಣಕ್ಕಾಗಿ ನಿಗಾ ವಹಿಸುವ ಹೆಸರಲ್ಲಿ ಯಾರಿಗೆ ಅಧಿಕಾರ ನೀಡಲಾಗುತ್ತಿದೆ ಎಂಬುದು ಪ್ರಶ್ನಾರ್ಹ.

ಅಂತರ್ಜಾಲದಲ್ಲಿ ಆಕ್ಷೇಪಾರ್ಹ ಸಂಗತಿಗಳ ಬಿತ್ತರದ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ 310 ಜಾಲಪುಟಗಳ ನಿರ್ಬಂಧಕ್ಕೆ ನಿರ್ದೇಶನ ನೀಡಿದೆ. ಇವುಗಳಲ್ಲಿ ಟ್ವಿಟರ್, ಫೇಸ್‌ಬುಕ್ ಪುಟಗಳು, ಯೂ ಟ್ಯೂಬ್ ವಿಡಿಯೊಗಳು, ಬ್ಲಾಗ್ ಅಂಕಣಗಳು, ಜಾಲತಾಣಗಳ ಕೆಲವು ಪುಟಗಳು ಅಥವಾ ಇಡೀ ಜಾಲತಾಣಗಳು ಸೇರಿವೆ. ಸಹಜವಾಗಿಯೇ ಕೇಂದ್ರದ ಈ ಕ್ರಮ ದೊಡ್ಡ ವಿವಾದವಾಗಿದೆ. ಅಸ್ಸಾಂ ಹಿಂಸಾಚಾರಗಳ ನಂತರ ಬೆಂಗಳೂರು, ಚೆನ್ನೈ, ಹೈದರಾಬಾದ್, ಮುಂಬೈ ಮುಂತಾದ ನಗರಗಳಲ್ಲಿದ್ದ ಈಶಾನ್ಯ ಜನರಲ್ಲಿ ಭೀತಿ ಹುಟ್ಟಿಸುವ ವದಂತಿಗಳನ್ನು ಪ್ರಚಾರ ಮಾಡಲು ಅಂತರ್ಜಾಲದ ಸಾಮಾಜಿಕ ತಾಣಗಳನ್ನು ಬಳಸಿಕೊಳ್ಳಲಾಗಿತ್ತು. ಇದು ಸೃಷ್ಟಿಸಿದ ಭೀತಿಯಿಂದಾಗಿ ಸಾವಿರಾರು ಜನರು ತಂತಮ್ಮ ರಾಜ್ಯಗಳಿಗೆ ಸಾಮೂಹಿಕ ಗುಳೆ ಹೋಗುವಂತಹ ಪರಿಸ್ಥಿತಿ ಸೃಷ್ಟಿಯಾದದ್ದು ಸ್ವತಂತ್ರ ಭಾರತದಲ್ಲಿ ದೊಡ್ಡ ಕಪ್ಪುಚುಕ್ಕೆ ಎನಿಸಿತ್ತು. ಈ ಹಿನ್ನೆಲೆಯಲ್ಲಿ ವದಂತಿಗಳ ನಿಯಂತ್ರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮ ಈಗ ಮತ್ತೊಂದು ವಿವಾದಕ್ಕೆ ಕಾರಣವಾಗುತ್ತಿರುವುದು ವಿಪರ್ಯಾಸ.

ನಿಜ. ದ್ವೇಷ, ಹಿಂಸೆಯನ್ನು ಪ್ರಚೋದಿಸುವ ವಿಚಾರಗಳು ಅಥವಾ ನಿರ್ದಿಷ್ಟ ಸಂಗತಿಗಳನ್ನು ಗುರಿಯಾಗಿಸಿಕೊಂಡು ದ್ವೇಷ ಬಿತ್ತುವ ಪ್ರವೃತ್ತಿಯನ್ನು ನಿರ್ಬಂಧಿಸಬೇಕು ಎಂಬುದರಲ್ಲಿ ಎರಡು ಮಾತೇ ಇಲ್ಲ. ಆದರೆ ಇಂತಹ ಕ್ರಮಗಳು ಪಾರದರ್ಶಕವಾಗಿರಬೇಕು, ವಸ್ತುನಿಷ್ಠವಾಗಿರಬೇಕು. ಸರಿಯಾದ ಕಾನೂನುಗಳೂ ಬೆಂಬಲಕ್ಕಿರಬೇಕು. ಸದ್ಯದ ಸ್ಥಿತಿಯಲ್ಲಿ ನಿರ್ಬಂಧಗಳನ್ನು ವಿಧಿಸುವುದಕ್ಕಾಗಿ ಸರ್ಕಾರ ಯಾವ ಕಾನೂನನ್ನು ಬಳಸಿಕೊಂಡಿದೆ ಎಂಬುದು ಸ್ಪಷ್ಟವಾಗಿಲ್ಲ. ನಿರ್ದೇಶನಗಳನ್ನೇನೊ ಸರ್ಕಾರ ಹೊರಡಿಸಿದೆ. ಆದರೆ ಇವುಗಳನ್ನು ಯಾವ ಕಾನೂನುಗಳ ಅಡಿ ಹೊರಡಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟ ಉಲ್ಲೇಖಗಳಿಲ್ಲ. ಮಾಹಿತಿ ತಂತ್ರಜ್ಞಾನ ಕಾಯಿದೆ ಅನುಸಾರ ರೂಪಿಸಲಾಗಿರುವ 'ಐಟಿ ನಿಯಮಗಳು 2009' ಅಡಿ ಇರುವ ಕೆಲವೊಂದು ಮೂಲ ಷರತ್ತುಗಳೇ ಈ ನಿರ್ಬಂಧಗಳನ್ನು ವಿಧಿಸುವ ಸಂದರ್ಭದಲ್ಲಿ ಉಲ್ಲಂಘನೆಯಾಗಿದೆ. ನಿರ್ಬಂಧ ವಿಧಿಸುವ ಮೊದಲು 48 ಗಂಟೆಗಳಿಗೆ ಮುಂಚೆ ಸಂಬಂಧಿಸಿದವರಿಗೆ ನೋಟಿಸ್ ನೀಡಬೇಕೆಂಬುದು ಅಂತಹ ಒಂದು ಷರತ್ತು. ಜೊತೆಗೆ ಎಷ್ಟು ಕಾಲ ಈ ನಿರ್ಬಂಧ ಜಾರಿಯಲ್ಲಿರುತ್ತದೆ ಎಂಬುದನ್ನೂ ಸರ್ಕಾರದ ನಿರ್ದೇಶನ ಸ್ಪಷ್ಟಪಡಿಸಿಲ್ಲದಿರುವುದು ಟೀಕೆಗಳಿಗೆ ಗುರಿಯಾಗಿದೆ.

ಈ ಸನ್ನಿವೇಶವನ್ನು ಕೆಲವರು 1975ರಲ್ಲಿನ ತುರ್ತು ಪರಿಸ್ಥಿತಿ ಕಾಲಕ್ಕೆ ಹೋಲಿಸಿದ್ದಾರೆ. ಒಬ್ಬರು ಪ್ರಮುಖ ಬಲಪಂಥೀಯ ವಿಚಾರಧಾರೆಗಳ ಪತ್ರಕರ್ತರು ಹಾಗೂ ಇಂತಹದೇ ವಿಚಾರಧಾರೆಗಳುಳ್ಳವರ ಟ್ವಿಟರ್ ಖಾತೆಗಳನ್ನು ಸ್ಥಗಿತಗೊಳಿಸಿರುವುದು ವ್ಯಾಪಕ ಟೀಕೆಗಳಿಗೆ ಗುರಿಯಾಗಿದೆ. ನಿರ್ಬಂಧ ಆದೇಶಗಳಿಗೆ ಗುರಿಯಾದ ಅನೇಕ ತಾಣಗಳನ್ನು ಬೆಂಗಳೂರು ಮೂಲದ ಸೆಂಟರ್ ಫಾರ್ ಇಂಟರ್‌ನೆಟ್ ಅಂಡ್ ಸೊಸೈಟಿ ಸಂಸ್ಥೆ ವಿಶ್ಲೇಷಿಸಿದೆ. ಈ ಅನೇಕ ತಾಣಗಳು ವಾಸ್ತವವಾಗಿ ವದಂತಿಗಳ ಕುರಿತಂತೆ ಜನರಲ್ಲಿ ಅರಿವು ಮೂಡಿಸುವಂತಹವಾಗಿದ್ದವು. ತಪ್ಪು ಕಲ್ಪನೆಗಳನ್ನು ತೊಡೆದುಹಾಕಿ ಸರಿಯಾದ ಚಿತ್ರಣಗಳನ್ನು ನೀಡಲು ಶ್ರಮಿಸುವಂತಹವಾಗಿದ್ದವು ಈ ತಾಣಗಳು ಎಂದು ಈ ವಿಶ್ಲೇಷಣೆಗಳು ತಿಳಿಸಿವೆ.

ಆನ್‌ಲೈನ್ ನಿಯಂತ್ರಣ ಕುರಿತಂತೆ ಸರ್ಕಾರಕ್ಕಿರುವ ಅಪ್ರಬುದ್ಧ ಪರಿಕಲ್ಪನೆಗಳನ್ನು ಈ ವಿದ್ಯಮಾನ ಬಯಲುಗೊಳಿಸಿದಂತಾಗಿದೆ. ನಿಜಕ್ಕೂ ಅಂತರ್ಜಾಲದಲ್ಲಿ ದ್ವೇಷ ಬಿತ್ತುತ್ತಿದ್ದಲ್ಲಿ ಕಾನೂನಿನ ಪ್ರಕಾರವೇ ಅಂತಹದರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರವನ್ನು ಸರ್ಕಾರ ಪರಿಶೀಲಿಸುವುದು ಸಾಧ್ಯವಿತ್ತು.

ಅಂತರ್ಜಾಲ ಎಂಬುದು ಅತ್ಯಂತ ಪ್ರಜಾಸತ್ತಾತ್ಮಕ ವೇದಿಕೆ ಅಥವಾ ಸಾಧನ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆನ್‌ಲೈನ್‌ನ ವಿಶಿಷ್ಟ ಸ್ವರೂಪಗಳನ್ನು ಗೌರವಿಸುವುದೂ ಅಗತ್ಯ. ಆದರೆ 'ದ್ವೇಷ ಬಿತ್ತುವ ವಿಚಾರ'ಗಳ ನಿಯಂತ್ರಣಕ್ಕಾಗಿ ನಿಗಾ ವಹಿಸುವ ಹೆಸರಲ್ಲಿ ಯಾರಿಗೆ ಅಧಿಕಾರ ನೀಡಲಾಗುತ್ತಿದೆ ಎಂಬುದು ಪ್ರಶ್ನಾರ್ಹ. ನಿರ್ಬಂಧಗಳ ಹೆಸರಲ್ಲಿ ಹೆಚ್ಚಿನ ಅಧಿಕಾರ ದಕ್ಕುವುದು ಪೊಲೀಸ್ ಹಾಗೂ ಅಧಿಕಾರಶಾಹಿಗೆ. ಆದರೆ ನಿಜಕ್ಕೂ ಯಾವುದು ಆಕ್ಷೇಪಾರ್ಹ ಅಥವಾ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆ ಮಾಡುವಂತಹದ್ದು ಎಂಬುದನ್ನು ನಿರ್ಧರಿಸಬೇಕಿರುವುದು ನ್ಯಾಯಾಲಯಗಳು.

ವಿಚಾರಗಳನ್ನು ತೆಗೆದು ಹಾಕಬೇಕೆಂದು ನಿಯಮಿತವಾಗಿ ಅಂತರ್ಜಾಲ ಕಂಪೆನಿಗಳಿಗೆ ನಿರ್ದೇಶನ ನೀಡುವ ರಾಷ್ಟ್ರಗಳ ಪಟ್ಟಿಯಲ್ಲಿ ಕಳೆದ ವರ್ಷ ಭಾರತ ಮೊದಲ ಸ್ಥಾನದಲ್ಲಿತ್ತು ಎಂಬುದನ್ನು 'ಗೂಗಲ್ ಟ್ರಾನ್ಸ್‌ಪರೆನ್ಸಿ' ವರದಿ ಬಯಲು ಮಾಡಿದೆ. ಭಾರತ ಆನ್‌ಲೈನ್ ಸೆನ್ಸಾರ್‌ಷಿಪ್‌ಗೆ ಅವಕಾಶ ನೀಡುತ್ತಿರಬಹುದು ಎಂಬ ಭೀತಿ ಅನೇಕ ಮಂದಿಯದ್ದು. ಸಕಾರಾತ್ಮಕ ವಿಚಾರಗಳ ಪಸರಿಸುವಿಕೆಗೂ ಸಾಮಾಜಿಕ ತಾಣಗಳನ್ನು ಸಶಕ್ತ ವೇದಿಕೆಯಾಗಿ ಬಳಸಿಕೊಳ್ಳುವುದು ಸಾಧ್ಯ ಎಂಬುದರತ್ತ ಸರ್ಕಾರ ಗಮನ ಹರಿಸುವುದು ಒಳ್ಳೆಯದು.

■ ಸಿ.ಜಿ.ಮಂಜುಳಾ

